# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 155, ಹನುಮಂತನಗರ, ಬೆಂಗಳೂರು.

ದಿನಾಂಕ: 10-11-2022

ಸಂಖ್ಯೆ: ಸ.ಅ/ವಾ-155/ /2022-23

## ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 08-11-2022 ಮಂಗಳವಾರ ವಾರ್ಡ್ ಸಂಖ್ಯೆ: 211, ಹನುಮಂತನಗರ ವಾರ್ಡ್ ಕಛೇರಿಯಲ್ಲಿ ನಡೆದ ನವೆಂಬರ್ ತಿಂಗಳ 1ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಹರಿಹರಗುಡ್ಡ ಪಾರ್ಕ್, ಹನುಮಂತನಗರ,
ಸಮಯ: ಬೆಳಿಗ್ಗೆ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀಮತಿ. ಉಮಾದೇವಿ ಎಂ ಬಳಿಗಾರ್, | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 2 | ಶ್ರೀ ಟಿ. ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-211, ಹನುಮಂತನಗರ |
| 3 | ಶ್ರೀ. ಧರ್ಣೇಂದ್ರ ಕುಮಾರ್. | ಕಾರ್ಯಪಾಲಕ ಅಭಿಯಂತರರು, ಬ.ಗು |
| 4 | ಶ್ರೀ. ಹರ್ಷ | ಸಹಾಯಕ ಅಭಿಯಂತರರು |
| 5 | ಶ್ರೀ. ಆರ್. ವಿಜಯ್ ಕೃಷ್ಣ | ಕಂದಾಯ ಪರಿವೀಕ್ಷಕರು |
| 6 | ಡಾ॥ ಎಂ.ರಿಜ್ವಾನ್ ಬೇಗಂ | ಡಾಕ್ಟರ್ |
| 7 | ಶ್ರೀ. ಪಿಳ್ಳಪ್ಪ | ಸಾರ್ವಜನಿಕರು |
| 8 | ಶ್ರೀ.ಎಲ್. ಕುಮಾರ್ | ಸಾರ್ವಜನಿಕರು |
| 9 | ಶ್ರೀ.ಆರ್. ಗಿರಿಜಾ | ಸಾರ್ವಜನಿಕರು |
| 10 | ಶ್ರೀ. ಉದಯ್ | ಸಾರ್ವಜನಿಕರು |
| 11 | ಶ್ರೀ. ಕೆ.ಎಂ. ವೆಂಕಟೇಶ್ | ಸಾರ್ವಜನಿಕರು |
| 12 | ಶ್ರೀ. ಸುದರ್ಶನ್ ಡಿ.ಎನ್ | ಸಾರ್ವಜನಿಕರು |
| 13 | ಶ್ರೀ. ಪ್ರಕಾಶ್ | ಸಾರ್ವಜನಿಕರು |
| 14 | ಶ್ರೀ. ಉಮೇಶ್. ಸಿ | ಸಾರ್ವಜನಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀಮತಿ. ಉಮಾದೇವಿ ಎಂ ಬಳಿಗಾರ್, ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆ ತಿರುವುಗಳಲ್ಲಿ ವಾಹನ ನಿಲುಗಡೆಯನ್ನು, ಗವಿಗಂಗಾಧರೇಶ್ವರ ದೇವಸ್ಥಾನ ಮುಂಭಾಗದ ರಸ್ತೆಯಲ್ಲಿನ ಪಾರ್ಕಿಂಗ್ ಸಮಸ್ಯೆ, ಮಾರುತಿ ಸರ್ಕಲ್, 4ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆಗಳಲ್ಲಿನ ಅನಧಿಕೃತ ವಾಹನ ನಿಲುಗಡೆಯನ್ನು ಸರಿಪಡಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ.

ಈ ಬಗ್ಗೆ ಸಂಬಂಧಿಸಿದ ಸಂಚಾರ ಪೋಲೀಸ್ ರವರಿಗೆ ವಿಷಯ ತಿಳಿಸಿ ಕ್ರಮಕೈಗೊಳ್ಳಲು ಸೂಚಿಸುವುದಾಗಿ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿರುತ್ತಾರೆ.

ಕಗ್ಗೀಸ್ ಬೇಕರಿ ಸಮೀಪ ವಿದ್ಯುತ್ ಕಂಬಗಳನ್ನು ತೆರವುಗೊಳಿಸುವುದು ಹಾಗೂ 5ನೇ ಮುಖ್ಯರಸ್ತೆ, 9ನೇ ಮುಖ್ಯರಸ್ತೆಯಲ್ಲಿನ ಹೈಮಾಸ್ಟ್ ದೀಪಗಳನ್ನು ದುರಸ್ಥಿ ಪಡಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ.

ಈ ಬಗ್ಗೆ ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಕ್ರಮ: ಕಾ.ಪಾ.ಅ(ವಿ-ದ)

ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆ ಬದಿಯ ಮರಗಳ ಒಣಗಿದ ರೆಂಬೆ ಕೊಂಬೆಗಳನ್ನು ತೆಗೆಸಲು ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಸೂಚಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ.

ಕ್ರಮ: ಅರಣ್ಯಾಧಿಕಾರಿಗಳು (ದ)

ಪಾದಚಾರಿ ರಸ್ತೆಗಳಲ್ಲಿನ ಅನಧಿಕೃತ ವಸ್ತುಗಳ ತೆರವುಗೊಳಿಸುವಿಕೆ, ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು, ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲು ಹಾಕಿರುವ ಚೇಂಬರ್‌ಗಳ ಎತ್ತರವನ್ನು ತಗ್ಗಿಸುವುದು, ಈಜುಕೊಳದ ಬಳಿ ರಸ್ತೆಗಳಲ್ಲಿನ ಅಂಗಡಿಗಳ ತೆರವುಗೊಳಿಸುವಿಕೆ, ಖಾಲಿ ಜಾಗಗಳಲ್ಲಿನ ಕಸ ಮತ್ತು ತ್ಯಾಜ್ಯವನ್ನು ತೆರವುಗೊಳಿಸುವುದು, 4ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ ಹನುಮಂತನಗರದಲ್ಲಿ ಪಾದಚಾರಿ ರಸ್ತೆಯಲ್ಲಿ ಕಲ್ಲುಚಪ್ಪಡಿ ಹಾಕುವುದು ಮುಂತಾದ ಸಮಸ್ಯೆಗಳನ್ನು ಸಭೆಯಲ್ಲಿ ಸಾರ್ವಜನಿಕರು ತಿಳಿಸಿರುತ್ತಾರೆ.

ಈ ಬಗ್ಗೆ ಕ್ರಮಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಧ್ಯಕ್ಷರು ರವರು ಈ ವಿಷಯಗಳ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಅಧ್ಯಕ್ಷರು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು 10/4
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 211, ಹನುಮಂತನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 211, ಹನುಮಂತನಗರ